ಬಳ್ಳಾರಿ ಜಿಲ್ಲೆಯಲ್ಲಿ ಕಳ್ಳತನ ಹಾಗೂ ದರೋಡೆತನಗಳ ಪ್ರಕರಣಗಳು

೪೪(೩೫೫) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬಳ್ಳಾರಿ ಜಿಲ್ಲೆಯಲ್ಲಿ ೧೯೮೪, ೧೯೮೫ ಮತ್ತು ೧೯೮೬ರಲ್ಲಿ ದಾಖಲಾದ ಕಳ್ಳತನ ಮತ್ತು ದರೋಡೆಗಳ ಪ್ರಕರಣಗಳೆಷ್ಟು?

ಆ) ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ?

ಇ) ಹಂಪಿ, ಹೊಸಕೋಟೆ ಹಾಗೂ ಸಂಡೂರು ತಾಲ್ಲೂಕಿನ ಸುಲ್ತಾನ್‌ಪುರ ಅಡ್ಡರಸ್ತೆಯಲ್ಲಿ ನಡೆದ ದರೋಡೆ ಪ್ರಕರಣಗಳಲ್ಲಿ ಅಪರಾಧಿಗಳನ್ನು ಪತ್ತೆಹಚ್ಚದೆ ಇರುವುದು ನಿಜವೇ ?

ಈ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—

ವಿವರಗಳು ಈ ಕೆಳಕಂಡಂತಿವೆ.

		೧೯೮೪	೧೯೮೫	೧೯೮೬
ಅ)	ದರೋಡೆ	೧೨	೯	೧೨
	ಕಳ್ಳತನ	೫೯೭	೫೫೭	೪೬೫
		೧೯೮೪	೧೯೮೫	೧೯೮೬
ಆ)	ದರೋಡೆ	೬	೫	೫
	ಕಳ್ಳತನ	೨೮೯	೨೮೬	೧೨೬

ಇ) ಹಂಪಿ ಮತ್ತು ಹೊಸಪೇಟೆಯಲ್ಲಿ ನಡೆದ ದರೋಡೆ ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೆ ಹಚ್ಚಲಾಗಿದೆ. ಸುಲ್ತಾನಪುರ ಅಡ್ಡರಸ್ತೆಯಲ್ಲಿ ನಡೆದ ಡಕಾಯಿತಿ ಆರೋಪಿಗಳನ್ನು ಪತ್ತೆಹಚ್ಚಲು ವಿಶೇಷ ದಳವನ್ನು ನೇಮಿಸಲಾಗಿದೆ ಮತ್ತು ಇದನ್ನು ಪತ್ತೆ ಹಚ್ಚಲು ಸರ್ವ ಪ್ರಯತ್ನ ಮಾಡಲಾಗುತ್ತಿದೆ.

ಶ್ರೀ ಯು. ಭೂಪತಿ.—ದರೋಡೆ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಪ್ರಶ್ನೆ ಏಕೆ ಕೇಳಿದೆ ಎಂದರೆ, ನಾನು ಈ ಪ್ರಶ್ನೆಯನ್ನು ಕೇಳಿದ ಮೇಲೆ ಹಂಪೆ ಹಾಗೂ ಹೊಸಪೇಟೆಯಲ್ಲಿ ಅದಂತಹ ದರೋಡೆಯನ್ನು ಪತ್ತೆ ಹಚ್ಚಿದ್ದಾರೆ. ಅವರನ್ನು ನೋಡಿದ ಮೇಲೆ ಬೆಂಗಳೂರು ನಗರದ ಸುತ್ತ ಮುತ್ತ ಮಾಡಿದಂತಹ ದರೋಡೆ ಕೋರರಂತಲ್ಲ ಎಂದು. ಆ ದರೋಡೆ ಕೋರರು ತಮ್ಮ ಕೈಯ್ಯಲ್ಲಿ ಬರಿ ಕಲ್ಲು ಹಾಗೂ ಕಟ್ಟಿಗೆಯನ್ನು ಹಿಡಿದುಕೊಂಡಿದ್ದರು. ಇಂತಹವರನ್ನು ಒಂದು ಪ್ರಕರಣದಲ್ಲಿ ಪತ್ತೆ ಹಚ್ಚಿದ್ದಾರೆ. ಇನ್ನೊಂದೇ ದರೋಡೆ ಪ್ರಕರಣದಲ್ಲಿ ಇನ್ನೂ ಪತ್ತೆ ಹಚ್ಚುವುದಕ್ಕಾಗಿಲ್ಲ. ರಾತ್ರಿ ಸಮಯದಲ್ಲಿ ಸುಲ್ತಾನ್ ಪುರ ರಸ್ತೆಯಲ್ಲಿ ಬರುತ್ತಿದ್ದಂತಹ ಬಸ್ಸನ್ನು ೭ ಜನ ಡಕಾಯಿತರು ತಡೆದು ಬಸ್ಸಿನಲ್ಲಿದ್ದಂತಹ ಪ್ರಯಾಣಿಕರನ್ನು ಇಂಜೂರ್ ಮಾಡಿ, ಅಪಾರವಾಗಿದ್ದಂತಹ ಸಾಮಾನುಗಳನ್ನು ಕಿತ್ತುಕೊಂಡು ಹೋಗಿರತಕ್ಕ ಪ್ರಕರಣ. ಅದನ್ನು ಪತ್ತೆ ಹಚ್ಚುವುದಕ್ಕೆ ಸಾಧ್ಯವಾಗಿಲ್ಲದಿರುವುದಕ್ಕೆ ಕಾರಣ ಏನು ? ನಿಮ್ಮ ಅಂಕಿ ಅಂಶಗಳ ಪ್ರಕಾರವೇ ಆಲ್ಲಿ ನಡೆದಿರುವಂತಹ ದರೋಡೆಗಳು ೧೯೮೪ ರಿಂದ ೧೯೮೬ರವರೆಗೆ ಶೇಕಡ ೫೦ ರಷ್ಟು ಪತ್ತೆ ಹಚ್ಚುವುದಕ್ಕಾಗಿಲ್ಲ. ಎಂದ ಮೇಲೆ ಪೋಲೀಸ್ ಇಲಾಖೆ ಏಕೆ ಇರಬೇಕು ? ಪೋಲೀಸ್ ಇಲಾಖೆ ಮಾಡುತ್ತಿರ ತಕ್ಕಂತಹ ಕೆಲಸವಾದರೂ ಏನೂ ? ಏಕೆ ಇದುವರೆವಿಗೂ ಪತ್ತೆ ಹಚ್ಚುವುದಕ್ಕೆ ಆಗದಿರುವುದಕ್ಕೆ ಏನು ಎಂಬುದನ್ನು ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೇ, ೫೦ ಪರ್ಸೆಂಟ್ ಆದರೂ ಕೂಡಾ ಪತ್ತೆ ಹಚ್ಚಿಲ್ಲ ಎಂದು ಅವರು ಹೇಳುತ್ತಿದ್ದಾರೆ. ೧೨ರಲ್ಲಿ ೬ ಜನ ಡಕಾಯಿತಿಗಳು, ಹಾಗೂ ೯ ರಲ್ಲಿ ೫ನ್ನು, ಮತ್ತೆ ೧೨ರಲ್ಲಿ ೫ನ್ನು ಪತ್ತೆಹಚ್ಚಲಾಗಿದೆ. ಎಂದೆರೆ ಸರಾಸರಿ ೫೦ ಬರುತ್ತದೆ. ಇದಕ್ಕೆ ತಪ್ಪು ಶಹಭಾಷ್‌ಗಿರಿ ಕೊಡಬೇಕು. ಹಂಪೆ ಮತ್ತು ಹೊಸಪೇಟೆ ದರೋಡೆಯಲ್ಲಿ ೭ ಜನ ಆರೋಪಿಗಳಿಂದ ೩ ಸಾವಿರ ರೂ. ಗಳ ವಸ್ತು, ಚಿನ್ನದ ಉಂಗುರ, ಒಂದು ಜೊತೆ ಚಿನ್ನದ ಬೆಂಡೋಲೆ ವಶಪಡಿಸಿಕೊಳ್ಳಲಾಗಿದೆ.

ಇನ್ನು ಸುಲ್ತಾನ್ ಪುರ ಆಡ್ಡರಸ್ತೆಯಲ್ಲಿ ನಡೆದ ದರೋಡೆ ಪ್ರಕರಣದಲ್ಲಿ ೯.೪೫ರ ಸಮಯದಲ್ಲಿ ೨೦ ಜನ ರಸ್ತೆಗೆ ಆಡ್ಡಲಾಗಿ ಕಲ್ಲು ಇಟ್ಟು ಕೆ. ಎಸ್. ಆರ್. ಟಿ. ಸಿ. ಬಸ್ (ಸಂಖ್ಯೆ ೩೦೩೨) ನಿಲ್ಲಿಸಿ ಗ್ಲಾಸ್ ಹೊಡೆದು ಪ್ರಯಾಣಿಕರಿಂದ ೨೨೧೦ ರೂ. ದರೋಡೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಚಾಲಕನ ಫಿರ್ಯಾದಿ ತೆಗೆದುಕೊಂಡು ೧೫೧ ಗುಣ್ಣೆ ಪ್ರಕಾರ ದಾಖಲು ಮಾಡಿ ಪತ್ತೆ ಕಾರ್ಯ ನಡೆಯುತ್ತಿದೆ. ಬಹುಶಃ ಆ ಬಗ್ಗೆ ಹೆಚ್ಚಿನ ವಿಷಯ ತಿಳಿಸಿದರೆ ಸಹಕಾರಿ ಆಗುತ್ತದೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಯು. ಭೂಪತಿ.—ವಿಷಯ ತಿಳಿಸಿದರೆ ಎನ್ನುವ ಪ್ರಶ್ನೆ ಇಲ್ಲ. ಇದು ನನ್ನ ಕ್ಷೇತ್ರದಲ್ಲಿ ಆಗಿದ್ದು ಬೆಳಗಿನ ತನಕ ನಾನು ಪೋಲೀಸರ ಜೊತೆಯಲ್ಲಿ ತಿರುಗಿದ್ದೇನೆ. ಅಲ್ಲಿ ಪೊಜೆಸಿಕೊಂಡವರು ನೇರವಾಗಿ ನನ್ನ ಮನೆಗೆ ಬಂದರು. ಆಗ ನಾನು ಡಕಾಯಿತಿ ಆಗಿರುವುದರ ಬಗ್ಗೆ ಲೈಟ್ಮಿಂಗ್ ಕಾಲ್ ಮಾಡಿ ಪೋಲೀಸಿನವರನ್ನು ಆಲ್ಲಿಗೆ ಕರೆಸಿಕೊಂಡೆ. ಆಲ್ಲಿ ಪೋಲೀಸಿನವರ ಕಾರ್ಯ ನನಗೆ ಇಷ್ಟವಾಗಲಿಲ್ಲ. ಆವರಿಗೆಲ್ಲಾ ದರೋಡೆ ಬಗ್ಗೆ ಕಳ್ಳರನ್ನು ಹೇಗೆ ಟ್ರ್ಯಾಪ್ ಮಾಡಬೇಕೆಂಬ ಬಗ್ಗೆ ಟ್ರೈನಿಂಗ್ ಆಗಿರುತ್ತದೆ. ಆವತ್ತು ಶ್ವಾನ ದಳ, ಗನ್ ಪೋಲೀಸಿನವರನ್ನೇ ಕಳುಹಿಸಿಕೊಟ್ಟಿದ್ದರೆ ಮತ್ತು ರೋಡ್ ಬ್ಲಾಕ್ ಮಾಡಿ ಕೆಲಸ ಮಾಡಿದ್ದರೆ ಆವತ್ತೇ ಅವರನ್ನು ಹಿಡಿಯಬಹುದಾಗಿತ್ತು. ಈ ಬಗ್ಗೆ ಹೇಳಿದರೂ ಕೆಲಸ ಆಗಲಿಲ್ಲ. ಇಂತಹ ಅಧಿಕಾರಿಗಳು ಈ ಇಲಾಖೆಯಲ್ಲಿ ಇರಬಾರದು. ಇವರನ್ನು ಕಿತ್ತು ಇಂಟಲಿಜೆನ್ಸಿಗೋ ಅಥವಾ ಸಿ.ಐ.ಡಿ.ಗೋ ಹಾಕಿ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಹೇಳಿದ ಪ್ರಕಾರ ಅಲ್ಲಿ ಕರ್ತವ್ಯಲೋಪ ಮಾಡಿದ್ದಾರೆಂದು ಅರ್ಥವಾಗುತ್ತದೆ. ನಾನು ಇದನ್ನು ವಿಚಾರ ಮಾಡುತ್ತೇನೆ.

ಸಿಯೋಲ್ ಏಶಿಯಾಡ್ ಕ್ರೀಡಾಕೂಟಕ್ಕೆ ಕಳುಹಿಸಲಾದ ಗಣ್ಯರುಗಳು

೪೯ (೧೪೭) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) ಹಾಗೂ ವೇದಾಂತ ಹೆಬ್ಳಿಗೆ (ಕೃಷ್ಣರಾಜ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸಿಯೋಲ್ ಏಷಾಡ್ ಕ್ರೀಡಾಕೂಟಕ್ಕೆ ರಾಜ್ಯ ಸರ್ಕಾರದಿಂದ ಕಳುಹಿಸಿಕೊಟ್ಟಿರುವ ಮಹನೀಯರ ಹೆಸರು ಹಾಗೂ ಹುದ್ದೆಗಳೇನು?

ಆ) ರಾಜ್ಯ ಸರ್ಕಾರಕ್ಕೆ ಈ ವಿಷಯದಲ್ಲಿ ಬಂದಿರುವ ಒಟ್ಟಾರೆ ಖರ್ಚಾದ ಮೊತ್ತವೆಷ್ಟು?

ಇ) ಸಿಯೋಲ್ ಕ್ರೀಡಾ ಕೂಟದಲ್ಲಿ ಭಾಗವಹಿಸಿರುವ ಕ್ರೀಡಾಕೂಟದ ಮಹನೀಯರಿಗೆ ಪೂರ್ಣ ಹಣ ಕೊಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಕ್ರೀಡಾಪಟುಗಳಿಗೆ ಕೊಡಬೇಕಾಗಿರುವ ಹಣವನ್ನು ಸಮಯಾನುಸಾರ ಕೊಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

ಅ) ಶ್ರೀ ಬಿ.ಎಸ್. ರಾಘವನ್, ಅಧ್ಯಕ್ಷರು, ಕರ್ನಾಟಕ ರಾಜ್ಯ ಕ್ರೀಡಾ ಪರಿಷತ್ತು; ಮತ್ತು ಶಾಸಕರುಗಳಾದ :

ಶ್ರೀ ಕೆ.ಯು. ಜಾರ್ಜ್
ಶ್ರೀ ಎಸ್.ಸಿ. ಮಲ್ಲಿಗಿ
ಶ್ರೀ ಬಿ.ವಿ. ತುಂಗಳ್
ಶ್ರೀ ಡಿ.ಟಿ. ಜಯಕುಮಾರ್
ಶ್ರೀ ಎಸ್. ಚನ್ನಬಸವಯ್ಯ
ಶ್ರೀ ಐ.ಬಿ. ಶಂಕರ್
ಶ್ರೀ ಪಟವಮಕ್ಕಿ ರತ್ನಾಕರ
ಶ್ರೀ ಬಿ.ಐ. ಪಾಟೀಲ್
ಶ್ರೀ ಉಮೇಶ್ ವಿ. ಕಟ್ಟಿ
ಶ್ರೀ ಡಿ.ಬಿ. ಗಂಗಾಧರಪ್ಪ